# ಶ್ರೀಮಾತೆಯ ಚರಣಾಶ್ರಯದಲ್ಲಿ

ಮೂಲ ಬಂಗಾಳಿ : **ದಿನೇಶಚಂದ್ರ ಸೇನಗುಪ್ತ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



ಢಾಕಾ ಜಿಲ್ಲೆಯ ವಿಕ್ರಮಪುರಕ್ಕೆ ಸೇರಿದ ಭರಾಕರ್ ಗ್ರಾಮದಲ್ಲಿ (ಈಗ ಬಾಂಗ್ಲಾದೇಶದಲ್ಲಿದೆ) ನಮ್ಮ ಮನೆಯಿತ್ತು. ೧೯೧೩ನೇ ಇಸವಿಯ ಕೋಜಾಗರಿ ಲಕ್ಷ್ಮಪೂಜೆಯೆಂದು ಬಾಗ್ ಬಜಾರಿನ 'ಶ್ರೀಮಾತೆಯವರ ಮನೆ'ಯಲ್ಲಿ ('ಉದ್ಬೋಧನ') ನಾನು ಮತ್ತು ನನ್ನ ಪತ್ನಿ ರಾಜಬಾಲಾ ಶ್ರೀಮಾತೆಯವರ ಚರಣಾಶ್ರಯವನ್ನು ಪಡೆದೆವು. ಆಗ ನನ್ನ ಪತ್ನಿಯ ವಯಸ್ಸು ಇಪ್ಪತ್ತು. ನನಗೆ ಮೂವತ್ತು ವರ್ಷ. ಎಂಟು ವರ್ಷಗಳ ಮೊದಲು, ಅಂದರೆ ೧೯೦೫ರಲ್ಲಿ ನಮ್ಮ ವಿವಾಹವಾಗಿತ್ತು. ಆಗ ನನ್ನ ಪತ್ನಿಗೆ ಹನ್ನೆರಡು ವರ್ಷ ವಯಸ್ಸು. ಇಲ್ಲಿಯವರೆಗೂ ನಮಗೆ ಮಕ್ಕಳಾಗದ ಕಾರಣ, ನನ್ನ ಪತ್ನಿ ನಮ್ಮ ಬಂಧುಜನರಿಂದ ಹಲವು ಬಗೆಯ ಅವಹೇಳನ, ನಿಂದನೆಗಳನ್ನು ಸಹಿಸಿಕೊಳ್ಳಬೇಕಾಗಿ ಬಂತು. ಈ ಕಾರಣದಿಂದ ಅವಳು ಮಾನಸಿಕವಾಗಿ ಅತ್ಯಂತ ಕಷ್ಟ ಹಾಗೂ ಸಂಕಟಗಳಿಂದ ದಿನ ಕಳೆಯಬೇಕಾಗಿತ್ತು. ಬಂಧುಗಳ ಅವಹೇಳನದ ಮಾತುಗಳಿಂದ ತಪ್ಪಿಸಿಕೊಳ್ಳಲು ಹಾಗೂ ತನ್ನ ಕಷ್ಟ, ಸಂಕಟಗಳನ್ನು ಮರೆಯಲು ಆಕೆ ಮನೆಯಲ್ಲೇ ಹೊಲಿಗೆ ಕೆಲಸ ಮಾಡುತ್ತಿದ್ದಳು; ಹಾಗೂ ಊರಿನಲ್ಲಿದ್ದ ಹೆಣ್ಣು ಮಕ್ಕಳ ಪ್ರಾಥಮಿಕ ವಿದ್ಯಾಲಯದಲ್ಲಿ ವೇತನವಿಲ್ಲದೆ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಳು. ನಾನು ಢಾಕಾದಲ್ಲಿ ವೈದ್ಯನಾಗಿ ಕೆಲಸ ಮಾಡುತ್ತಿದ್ದೆ. ಒಂದು ದಿನ ರಾತ್ರಿ ನನ್ನ ಪತ್ನಿಗೆ ಕನಸು ಬಿತ್ತು. ರಾಮಕೃಷ್ಣ ಪರಮಹಂಸರ ಸಹಧರ್ಮಿಣಿಯಾದ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದುಕೊಂಡರೆ ಅವಳ ಮನಸ್ಸಿನ ಬಯಕೆ ಪೂರ್ಣಗೊಳ್ಳುವುದು, ಹಾಗೂ ಮನಸ್ಸಿಗೆ ಶಾಂತಿ ಲಭಿಸುವುದೆಂದು ಕನಸಿನಲ್ಲಿ ಆದೇಶವಾಗಿತ್ತು.

ನಮ್ಮ ಪಕ್ಕದ ಗ್ರಾಮವಾದ ಕಲ್ಮಾದಲ್ಲಿ ನನ್ನ ಸೋದರ ಸಂಬಂಧಿಯಾದ ವಿನೋದೇಶ್ವರ ದಾಸಗುಪ್ತ ಅವರು ವಾಸವಾಗಿದ್ದರು. ಅವರನ್ನು ಹಾಗೂ ಅವರ ಪತ್ನಿ(ಇಂದುಬಾಲಾ)ಯನ್ನು ಅಣ್ಣ-ಅತ್ತಿಗೆ ಎಂದೇ ನಾನು ಕರೆಯುತ್ತಿದ್ದೆ. ಅವರಿಂದ ನನ್ನ ಪತ್ನಿ ಶ್ರೀಮಾತೆಯವರ ಬಗ್ಗೆ ಕೇಳಿದ್ದಳು. ಅವರಿಬ್ಬರೂ ಈಗಾಗಲೇ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದರು.

ಕನಸಿನಲ್ಲಿ ಆದೇಶವನ್ನು ಪಡೆದ ನಂತರ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದುಕೊಳ್ಳಲು ನನ್ನ ಪತ್ನಿ ಅತ್ಯಂತ ವ್ಯಾಕುಲಗೊಂಡಳು. ಆದರೆ ನಮ್ಮ ವಂಶದಲ್ಲಿ ಕುಲಗುರುಗಳಿಂದಲೇ ದೀಕ್ಷೆ ಪಡೆಯುವ ಪದ್ಧತಿಯಿತ್ತು. ಆದ್ದರಿಂದ ನನ್ನ ತಾಯಿಯವರು ನನ್ನ ಪತ್ನಿಗೆ ಶ್ರೀಮಾತೆಯವರಿಂದ ದೀಕ್ಷೆ ಪಡೆಯುವುದಕ್ಕೆ ವಿರುದ್ಧ ನಿಂತಿದ್ದರು. ನಾನೂ ಈ ವಿಷಯದಲ್ಲಿ ನನ್ನ ತಾಯಿಯವರ ಪಕ್ಷ ವಹಿಸಿದ್ದೆ. ನಮ್ಮ ಸಮರ್ಥನೆಯಿಲ್ಲದಿದ್ದರೂ, ನನ್ನ ಪತ್ನಿ ಮಾತ್ರ ತನ್ನ ನಿರ್ಧಾರದಲ್ಲಿ ಅಚಲವಾಗಿದ್ದಳು. ಅವಳು ತಾನಾಗಿಯೇ ಶ್ರೀಮಾತೆಯವರಿಗೆ ಪತ್ರ ಬರೆದು, ತನ್ನ ಮನಸ್ಸಿನ ಬಯಕೆಯನ್ನು ತೋಡಿಕೊಂಡಿದ್ದಳು. ಶ್ರೀಮಾತೆಯವರು ಅವಳಿಗೆ, ಗುರುಹಿರಿಯರ ಅನುಮತಿ ಪಡೆದುಕೊಂಡು ಕಲ್ಕತ್ತೆಗೆ ಹೋಗುವಂತೆ ಹೇಳಿದ್ದರು. ನನ್ನ ಪತ್ನಿ ನನ್ನನ್ನು ಬಹಳವಾಗಿ ಒತ್ತಾಯಿಸಿದ್ದರಿಂದ ನಾನು ಅವಳನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗಲು ಒಪ್ಪದೆ ವಿಧಿಯಿರಲಿಲ್ಲ. ದೋಣಿಯಲ್ಲಿ ಪದ್ಮಾ ನದಿ ದಾಟಿ, ಸ್ಟೀಮರ್ ಮೂಲಕ ನಾವು ಗೋವಾಲಂದಾ(ಘಾಟ್)ಗೆ ಬಂದೆವು. ಅಲ್ಲಿಂದ ರೈಲಿನ ಮೂಲಕ ಇಡೀ ರಾತ್ರಿ ಪ್ರಯಾಣ ಮಾಡಿ ಕಲ್ಕತ್ತಾದ ಸಿಯಾಲ್ದಾ ಸ್ಟೇಶನ್ನಿನಲ್ಲಿ ಬಂದಿಳಿದೆವು. ಅಪರಿಚಿತವಾದ ಸ್ಥಳ; ಅಲ್ಲಿ ಯಾರೂ ಪರಿಚಿತರಿರಲಿಲ್ಲ ಕೂಡ. ಹೀಗಾಗಿ ನಾನು ಪತ್ನಿಯೊಂದಿಗೆ ನೇರ ಬಾಗ್‌ಬಜಾರಿನ 'ಶ್ರೀಮಾತೆಯವರ ಮನೆ'ಯನ್ನು ತಲುಪಿದೆ. ಪತ್ನಿಯನ್ನು 'ಶ್ರೀಮಾತೆಯವರ ಮನೆ'ಯಲ್ಲಿ ಬಿಟ್ಟು, ನಾನು ಹೊರಗೆ ನಿಂತಿದ್ದೆ. ನನಗೆ ಶ್ರೀಮಾತೆಯವರ ದರ್ಶನ ಮಾಡಲು ಯಾವುದೇ ಬಯಕೆಯಿರಲಿಲ್ಲ.

ಶ್ರೀಮಾತೆಯವರೊಂದಿಗೆ ನನ್ನ ಪತ್ನಿ ತನ್ನ ದುಃಖಕ್ಕೆ ಕಾರಣವನ್ನು ಹಾಗೂ ಅವರಿಂದ ಮಂತ್ರದೀಕ್ಷೆ ಪಡೆಯುವ ಬಯಕೆಯನ್ನು ತಿಳಿಸಿದಾಗ ಅವರೆಂದರು: ''ಚಿಂತಿಸಬೇಡಮ್ಮಾ, ನಿನಗೆ ಖಂಡಿತ ಮಕ್ಕಳಾಗುವರು. ನೀನು ನಿನ್ನ ಕುಲಗುರುವಿನಿಂದ ಮಂತ್ರದೀಕ್ಷೆ ಪಡೆದುಕೊಂಡಿಲ್ಲವಲ್ಲ-ಆದ ಕಾರಣ ನಾನು ನಿನಗೆ ಮಂತ್ರದೀಕ್ಷೆ ನೀಡುತ್ತೇನೆ. ನೀನು ಯಾರೊಂದಿಗೆ ಬಂದಿದ್ದೀಯಾ?'' ನನ್ನ ಪತ್ನಿ ಹೇಳಿದಳು: ''ನನ್ನ ಪತಿಯೊಂದಿಗೆ.'' ಶ್ರೀಮಾತೆ

ಕೇಳಿದರು, ''ಮಗ (ಅಂದರೆ ನಾನು) ಎಲ್ಲಿದ್ದಾನೆ?'' ಪತ್ನಿ ಹೇಳಿದಳು, ''ಅವರು ರಸ್ತೆಯಲ್ಲಿ ನಿಂತಿದ್ದಾರೆ.'' ಶ್ರೀಮಾತೆ– ''ಅವನನ್ನು ಹೊರಗೆಯೇ ಬಿಟ್ಟು ಯಾಕೆ ಬಂದಿದ್ದೀಯಾ? ಮಗನನ್ನು ನನ್ನ ಬಳಿಗೆ ಕರೆದುಕೊಂಡು ಬಾ'' ಎಂದರು. ನನ್ನ ಪತ್ನಿ ಕೂಡಲೇ ಓಡಿಬಂದು, ನನ್ನನ್ನು ಕರೆದು, ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದಳು. ಒತ್ತಡಕ್ಕೆ ಒಳಗಾದ ನಾನು ಅತ್ಯಂತ ಗೊಂದಲದಿಂದ ಶ್ರೀಮಾತೆಯವರ ಬಳಿಗೆ ಹೋಗಿ ನಿಂತೆ. ಶ್ರೀಮಾತೆಯವರು ವಿಶೇಷ ಸ್ನೇಹಭಾವದಿಂದ ನನಗೆ ಹೇಳಿದರು: ''ಮಗೂ, ನೀನು ಹೊರಗೇ ಏಕೆ ನಿಂತುಬಿಟ್ಟೆ ? ನನ್ನಿಂದ ಮಂತ್ರದೀಕ್ಷೆ ಪಡೆಯಲಿಚ್ಛಿಸುವುದಿಲ್ಲವೆ? ನೀನು ನಿನ್ನ ಕುಲಗುರುವಿನಿಂದ ಮಂತ್ರದೀಕ್ಷೆ ಪಡೆದುಕೊಂಡಿದ್ದೀಯಾ?'' ನಾನು ತೀರ ಗಲಿಬಿಲಿಗೊಂಡು ಹೇಳಿದೆ, '' ಇಲ್ಲ, ನಾನು ಕುಲಗುರುಗಳಿಂದ ಮಂತ್ರದೀಕ್ಷೆ ಪಡೆದಿಲ್ಲ. ಈ ಕಾರಣದಿಂದ ನಾನು ನನ್ನ ತಾಯಿಯಿಂದ ಅನುಮತಿಯನ್ನು ಪಡೆದುಕೊಂಡು ಬಂದಿಲ್ಲ.'' ಇದನ್ನು ಕೇಳಿದ ಶ್ರೀಮಾತೆಯವರು ಸ್ನೇಹಪೂರಿತವಾದ ಮೃದು ಧ್ವನಿಯಿಂದ ಹೇಳಿದರು, ''ಮಗೂ, ಎಲ್ಲ ಕೆಲಸವನ್ನೂ ನಿನ್ನ ತಾಯಿಯವರ ಅನುಮತಿ ಪಡೆದೇ ಮಾಡುತ್ತೀಯಾ?'' ನಾನು ತಲೆತಗ್ಗಿಸಿಕೊಂಡು ಸುಮ್ಮನೆ ನಿಂತೆ. ಶ್ರೀಮಾತೆಯವರು ಶಾಂತವಾಗಿ, ಆದರೆ ದೃಢವಾದ ಭಾವದಿಂದ ಹೇಳಿದರು, ''ಗೊಂದಲಕ್ಕೊಳಗಾಗ ಬೇಡ, ಮಗೂ. ಇಬ್ಬರೂ ಹೋಗಿ ಗಂಗಾಸ್ನಾನ ಮಾಡಿ ಬನ್ನಿ. ನಾನು ನಿಮಗಿಬ್ಬರಿಗೂ ಮಂತ್ರದೀಕ್ಷೆ ನೀಡುತ್ತೇನೆ. ನನ್ನಿಂದ ನೀವು ಮಂತ್ರದೀಕ್ಷೆ ಪಡೆದುಕೊಂಡರೂ, ನೀವು ಕುಲಗುರುಗಳಿಂದ ಏನನ್ನು ಪಡೆಯುವಿರೋ ಅದನ್ನೇ ಖಂಡಿತ ಪಡೆಯುವಿರಿ.'' ಶ್ರೀಮಾತೆಯವರ ಈ ಮಾತುಗಳನ್ನು ಕೇಳಿ ನನಗೆ ಗಂಟಲು ಬಿಗಿದುಬಂತು. ಅಪೂರ್ವವಾದ, ಹಿಂದೆ ಅನುಭವಿಸಿರದ ಒಂದು ಆನಂದದ ಅನುಭವದಿಂದ ನನ್ನ ಹೃದಯ ತುಂಬಿಹೋಯಿತು. ನನ್ನ ಎರಡೂ ಕಣ್ಣುಗಳಿಂದ ಧಾರಾಕಾರ ನೀರು ಇಳಿಯಲಾರಂಭಿಸಿತು. ನಾನು ಶ್ರೀಮಾತೆಯವರ ಎರಡೂ ಪಾದಗಳನ್ನು ಸ್ಪರ್ಶಿಸಿ, ಅವರ ಪಾದಗಳ ಬಳಿ ಮಂತ್ರಮುಗ್ಧನಾದವನಂತೆ ಕುಳಿತುಬಿಟ್ಟೆ. ಅವರು ಏನೆಂದು ತಿಳಿದುಕೊಂಡರೋ ತಿಳಿಯದಾದೆ; ಅವರೆಂದರು, ''ನನಗೆ ಎಲ್ಲವೂ ಅರ್ಥವಾಗುತ್ತದೆ, ಮಗೂ. ನೀನೇನೂ ಚಿಂತೆ ಮಾಡಬೇಡ. ನಾನು ನಿಮಗಿಬ್ಬರಿಗೂ ದೀಕ್ಷೆ ನೀಡುತ್ತೇನೆ.''

ಅಂದೇ ಕೋಜಾಗರಿ ಲಕ್ಷ್ಮೀಪೂಜೆಯಾಗಿತ್ತು (೧೯೧೬). ಶ್ರೀಮಾತೆಯವರ ಮಾತಿನಂತೆ ನಾವಿಬ್ಬರೂ ಗಂಗಾಸ್ನಾನ ಮಾಡಿ ಬಂದೆವು. ಇಬ್ಬರಿಗೂ ಒಟ್ಟಿಗೇ ಮಂತ್ರದೀಕ್ಷೆ ನೀಡಿ, ಶ್ರೀಮಾತೆಯವರು ನಮ್ಮನ್ನು ಕೃತಾರ್ಥರನ್ನಾಗಿಸಿದರು.

೧೯೧೭ರ ಜೂನ್ ತಿಂಗಳ ಕೊನೆಯ ಭಾಗದಲ್ಲಿ ನಮ್ಮ ಮೊದಲ ಗಂಡುಮಗುವಿನ ಜನನವಾಯಿತು. ಮೊದಲ ಮಗುವನ್ನು ಶ್ರೀಮಾತೆಯವರಿಗೆ ತೋರಿಸಲು ನನ್ನ ಪತ್ನಿ ಅತ್ಯಂತ ಕಾತರಗೊಂಡಿದ್ದಳು. ಕೊನೆಗೆ ೧೯೧೮ರ ಡಿಸೆಂಬರ್ ತಿಂಗಳಲ್ಲಿ, ನನ್ನ ಮೊದಲ ಮಗನ ವಯಸ್ಸು ಎರಡೂವರೆ ವರ್ಷವಾಗಿದ್ದಾಗ ನನ್ನ ಪತ್ನಿ ಅವನನ್ನು ಕರೆದುಕೊಂಡು ಬಾಗ್‌ಬಜಾರಿನಲ್ಲಿದ್ದ ಶ್ರೀಮಾತೆಯವರ ಬಳಿಗೆ ಹೋದಳು. ಮಗನನ್ನು ಕಂಡು ಶ್ರೀಮಾತೆಯವರು ಅತ್ಯಂತ ಆನಂದಗೊಂಡು, ಅವನನ್ನು ಆಶೀರ್ವದಿಸಿದರು. ನನ್ನ ಪತ್ನಿ ಶ್ರೀಮಾತೆಯವರೊಂದಿಗೆ ಮಾತನಾಡುತ್ತಿದ್ದಳು. ಅದರ ನಡುವೆ, ನನ್ನ ಮಗ ಶ್ರೀಮಾತೆಯವರ ಮನೆಯಿಂದ ಹೊರಗೆ ಬಂದು ಮೆಟ್ಟಿಲಲ್ಲಿ ಬಿದ್ದು ತಲೆಗೆ ಗಾಯ ಮಾಡಿಕೊಂಡಿದ್ದ. ರಕ್ತವೇನೂ ಹೊರಬಂದಿರಲಿಲ್ಲ. ನನ್ನ ಪತ್ನಿ ಓಡಿ ಬಂದು, ಅಳುತ್ತಿದ್ದ ಮಗನನ್ನು ಮಡಿಲಲ್ಲಿ ಕುಳ್ಳಿರಿಸಿ ಸಮಾಧಾನ ಮಾಡಲು ಯತ್ನಿಸಿದಳು. ಆದರೆ ಅವನು ಅಳು ನಿಲ್ಲಿಸುತ್ತಲೇ ಇರಲಿಲ್ಲ. ಆಗ ಶ್ರೀಮಾತೆಯವರು ಸ್ವತಃ ತಾವೇ ಅಲ್ಲಿಗೆ ಬಂದು, ಮಗುವನ್ನು ನನ್ನ ಪತ್ನಿಯ ಮಡಿಲಿನಿಂದ ತನ್ನ ಮಡಿಲಿಗೆಳೆದುಕೊಂಡು, ಅವನನ್ನು ಮುದ್ದುಮಾಡತೊಡಗಿದರು. ಶ್ರೀಮಾತೆಯವರ ಮಡಿಲಿನಲ್ಲಿ ಕುಳಿತ ಅವನು ಅರೆಕ್ಷಣದಲ್ಲೇ ಶಾಂತನಾಗಿಬಿಟ್ಟ. ನನ್ನ ಈ ಮಗನಿಗೆ ನಾಲ್ಕು-ಐದು ವಯಸಾಗಿದ್ದಾಗ, ಅವನು ಕಾಲರಾಕ್ಕೆ ತುತ್ತಾಗಿದ್ದ. ಇದರೊಂದಿಗೆ ನನ್ನ ಅಣ್ಣನ ಇಬ್ಬರು ಗಂಡು ಮಕ್ಕಳೂ ಕಾಲರಾಕ್ಕೆ ತುತ್ತಾಗಿದ್ದರು. ನನ್ನ ಮಗ ಗುಣಮುಖನಾದ; ಆದರೆ ಅಣ್ಣನ ಮಕ್ಕಳಿಬ್ಬರೂ ತೀರಿಕೊಂಡರು. ಶ್ರೀಮಾತೆಯವರ ಅಭಯ ಸ್ಪರ್ಶದ ಫಲವಾಗಿಯೇ ನನ್ನ ಮಗ ಆ ಸಂದರ್ಭದಲ್ಲಿ ಮೃತ್ಯುವಿನ ಕಪಿಮುಷ್ಟಿಯಿಂದ ಪಾರಾಗಿ ಬಂದ ಎಂಬುದೇ ನನ್ನ ದೃಢನಂಬಿಕೆ![೧] ಈ ಮಗನ ನಂತರ ನನಗೆ ಇನ್ನಿಬ್ಬರು ಗಂಡುಮಕ್ಕಳು ಹಾಗೂ ಮೂವರು ಹೆಣ್ಣುಮಕ್ಕಳು ಹುಟ್ಟಿದರು. ಶ್ರೀಮಾತೆಯವರ ಆಶೀರ್ವಾದದಿಂದ ನನ್ನ ಪತ್ನಿಗೆ ಇದ್ದ ಸಂತಾನ ಬಯಕೆ ಪೂರ್ಣಗೊಂಡಿತು. ಕೇವಲ ಸಂತಾನ ಬಯಕೆಯಷ್ಟೇ ಅಲ್ಲ, ನಮ್ಮ ಜೀವನದ ಎಲ್ಲವನ್ನೂ ಶ್ರೀಮಾತೆಯವರು ಪರಿಪೂರ್ಣಗೊಳಿಸಿದರು.[೨]

---

೧. ಲೇಖಕನ ಈ ಮಗನ ಹೆಸರು ನಿಖಿಲರಂಜನ ಸೇನಗುಪ್ತ ಎಂದು. ಕಲ್ಕತ್ತಾ ಪುರಸಭೆಯ ವತಿಯಿಂದ ಅವರಿಗೆ ಇಂಜಿನಿಯರ್ ಆಗಿ ಉನ್ನತ ಪದವಿ ಲಭಿಸಿತ್ತು . ಈಗ (೧೯೯೮ರಲ್ಲಿ) ಅವರಿಗೆ ೮೨ ವಯಸ್ಸು; 'ಶಾರದೆ–ಸರಸ್ವತಿ' ತಮ್ಮನ್ನು ಮಡಿಲಿನಲ್ಲಿಟ್ಟುಕೊಂಡಿದ್ದರು, ಈ ವಿಶ್ವಾಸದಿಂದ ಅವರು ತಮ್ಮ ಜೀವನಪರ್ಯಂತ ಶಿಕ್ಷಣ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಧನ್ಯರಾಗಿದ್ದಾರೆ. *(–ಸಂ.)*

೨. ದಿನೇಶಚಂದ್ರ ಸೇನಗುಪ್ತರ (ನಿಧನ: ೧೯೬೧ ಫೆಬ್ರವರಿ ೯) ಈ ಸ್ಮೃತಿ ಲೇಖನವು ಅವರ ಎರಡನೇ ಪುತ್ರ ಶಿಶಿರರಂಜನ ಸೇನಗುಪ್ತ ಅವರ ಕೃಪೆಯಿಂದ ಲಭಿಸಿತು. ಲೇಖಕರ ಪತ್ನಿ ರಾಜಬಾಲಾ ಸೇನಗುಪ್ತ (ನಿಧನ: ೧೯೭೫ ಡಿಸೆಂಬರ್ ೧) ಅವರು ಶ್ರೀಮಾತೆಯವರಿಗೆ ಬರೆದ ೪ ಪತ್ರಗಳು ಶಿಶಿರರಂಜನ ಸೇನಗುಪ್ತ ಅವರ ಕೃಪೆಯಿಂದಲೂ, ಇನ್ನೆರಡು ಪತ್ರಗಳು ಲೇಖಕರ ಎರಡನೇ ಮಗಳು ನಿವೇದಿತಾ ದಾಸಗುಪ್ತ ಅವರ ಕೃಪೆಯಿಂದಲೂ ನಮಗೆ ಲಭಿಸಿವೆ. *(–ಸಂ.)*